ಸಂಭ್ರಮಗೊಂಡಿದ್ದೇ ಸಂಭ್ರಮಗೊಂಡಿದ್ದು.

ಇದನ್ನೆಲ್ಲಾ ಕೇಳಿಸಿಕೊಂಡ ಕಿಡಿಗೇಡಿ ರಾಮಣ್ಣ ಸುಮ್ಮನೇ ಕೂಡ್ಲಿಲ್ಲ. ಈ ಸ್ಮಾರ್ಟ್ ಸಿಟಿ ಆದರೆ ನಿನ್ನ ಸುತ್ತಮುತ್ತ ಇರೋ ಇಡೀ ಜಾಗವೆಲ್ಲಾ ಅವರಿಗೆ ಹೋಗುತ್ತ. ಅಲ್ಲೇ ಅವರು ಇವನ್ನೆಲ್ಲಾ ಶುರು ಹಚ್ಕೊಳ್ತಾರ. ಆದಾನಿ, ಅಂಬಾನಿ ಎಲ್ಲಾ ಸೇರಿ ನೀನಾ ಕಾಣಲಿಲ್ಲಂಗ ನಿನ್ನ ಸುತ್ತ ಹೆಲಿಪ್ಯಾಡ್, ಫಾರ್ಮಹೌಸ್ ಮಾಡ್ತಾರ. ಮೋರ್, ರಿಲಿಯನ್ಸ್, ಬಿಗ್ ಬಜಾರ್ ನಿನ್ನ ಸುತ್ತಾ ಹಬ್ಬುತ್ತಾವ. ನಿನ್ನ ತಲಿಮ್ಯಾಲ ಮೇಕ್ ಇನ್ ಇಂಡಿಯಾದ ವಿಮಾನ, ಹೆಲಿಕ್ಯಾಪ್ಟರ್ ಹಾರಾಡ್ತವ, ಅವಗೇನಮಾಡ್ತೀ? ಏನ್ ಭಂಡಾರದ ಜೋಳದ ಪಡಲಿಗೆ ಹೊತ್ಗೊಂಡು ಉಧೋ ಉಧೋ ಅಂತಾ ಕೂರ್ತಿ. ನಿನ್ ಸುತ್ತ ಡ್ರೋನ್ ಸುತ್ತುತ್ತಾವ. ಅವು ನಿನಗ ಕಾಣಂಗಿಲ್ಲ. ಇನ್ನು ನನ್ನಂತಹ ನರಪಿಳ್ಳೆ ಯಾವ ಲೆಕ್ಕ ನಡಿ,ನಡೀ... ಸುಮ್ಮನಾ ಉರಿಗಣ್ಣು ಅಲ್ಲ, ಬರೀಗಣ್ಣಿನಿಂದ ನೋಡಿದ್ರು ಸಾಹೇಬ್ರ ಸೂಟ್ನಲ್ಲಿರೋ ಮೋದಿ ಹೆಸರಿನ ಅಕ್ಷರವು ಕಂಡಿರಬಾರದು ಹಾಗಿರುತ್ತೆ ಅವರ ಸ್ಮಾರ್ಟ್ ಸಿಟಿ ಪ್ಲಾನ್.

ಕೇಳಲ್ಲಿ ನಿನ್ನ ಆಡಳಿತವನ್ನು ಅವರೇ ನಿಯಂತ್ರಿಸುತ್ತಾರ. ನಿನ್ನ ಪಲ್ಲಕ್ಕಿ, ನಿನ್ನ ಮುಳ್ಳು ಗದ್ದುಗೆ, ನಿನ್ನ ಅಗ್ನಿಕುಂಡ, ನಿನ್ನ ಜಂಡೇವು, ನಿನ್ನ ಶಂಖ, ಜಾಗಟೆ, ಗಂಟೆ, ಗರ್ಭಗುಡಿಯ ತೊಟ್ಟಿಲು ಒಂದಾ ಎರಡಾ ಏನ್ ನೀನು ತಲೆಮ್ಯಾಲ ಇಡ್ಕೊಂಡು ಕುತಗೊಂತೀ. ಎಲ್ಲಾ ಅವರೇ ನೋಡ್ಕೊಳ್ತಾರ. ಮಾನ ಇಲ್ಲದ್ದ. ಅಬರಗೇಡಿ. ಬಾಯಿಗೆ ಬಂದಂಗ ಮಾತಾಡ್ತೀ. ಖಬರ್ ಐತೋ ಇಲ್ಲೋ ನಿನಗ... ಬ್ಯೂಟಿ ಸಲೂನ್ ಮಸಾಜ್ ಪಾರ್ಲರ್‌ಗೆ ಹೋಗೊರು ಯಾರು? ನಾವು ನೀವು ಹೋಗ್ತೀವಾ, ಸ್ಮಾರ್ಟಾಗಿರೋದು ಅಂದ್ರೆ, ಸ್ಮಾರ್ಟಾಗಿ ಹಣ ಖರ್ಚು ಮಾಡುವುದು. ನನಗ ಎಲ್ಲಾ ಗೊತ್ತೈತಿ. ಆದು ನಿನಗೂ ಗೊತ್ತೈತಿ ಅದಕ ನಾವು ಹಿಂಗಾ ಇರೋದು. ನಾಳೆ ನಿನ್ನ ಬುಡ್ಡಾಕ ಬೆಂಕಿ ಬಿದ್ದಾಗ ಎಲ್ಲಾ ತಿಳಿತೈತಿ. ಆಯ್ತು ಇರುವಲ್ಲಕ್ಕ... ಏನೋ ಪೇಪರ್, ಟಿ.ವಿಯಲ್ಲಿ ಬಂದ ಸುದ್ದಿನ ನಾನು ಬಾಯಿ ಸುಮ್ಮನಿರಲಾರದ ನಿನ್ನ ಅರಳೀಕಟ್ಟಿ ಮ್ಯಾಲೆ ಮಾತಾಡಿದ್ದ ತಪ್ಪಾಯ್ತು ನೋಡು. ಅವನ್ನು ನೀನು ನಿನ್ನ ಗರ್ಭಗುಡಿಯೊಳಗೂ ತೊಗೊಂಡು ಹೋಗೋ ಜರೂರು ಏನಿತ್ತು?

ಪಾಪ ಸಿದ್ರಾಮಣ್ಣನಾದರೂ ಒಂದಿಷ್ಟು ಅನ್ನಭಾಗ್ಯನ್ನಾದರೂ ಕೊಟ್ಟಾನಪ್ಪಾ. ನೋಡ್ವಾ ನನ್ ಕಣ್ಮುಂದೆನಾ ಐದು ಗ್ಯಾರಂಟಿಗಳೂ ಬಂದ್ವು. ಇದ್ದದ್ದರಲ್ಲಿಯೇ ಸ್ಮಾರ್ಟ್ ಹಳ್ಳಿ ಮಾಡ್ತೀನಿ ಅಂತವನೆ. ಆದು ಆದರೆ ನಿನಗೊಂದಿಷ್ಟು ಅಲ್ಲಿ ಮುಕ್ತಿ ಸಿಗಬಹುದು. ನಿನ್ನ ಸ್ವಾತಂತ್ರ್ಯ ಯಾರು ಕಸಗಳಂಗಿಲ್ಲ. ಅಲ್ವೇ ಮಾರಮ್ಮಾಜೀ....ನೀನು ಹೀಗೇ ಮನ್ ಕೀ ಬಾತ್ ಅನ್ಕೋತನಾ ಕೇಕಿ ಹೊಡ್ಕಂತನಾ ಹೊಟ್ಟೆ ಹಸ್ಕೊಂಡು ಕುತ್ಕಬೇಕು. ನಿನಗ ಅದೇ ಗತಿ. ಇದಾ ಒಂದ ಊದಿನ ಕಡ್ಡಿನಾ ಗತಿ. ಸಿಕ್ಕರೆ ಅದೂ ಕೋಳಿ ಕುರಿ ಮಸಾಲೆ. ಇಲ್ಲಾಂದ್ರ ಹೊಟ್ಟೆ ದಬಾ ಹಾಕೊಂಡು ಅರಳಿಕಟ್ಟಗೆ ಮಲ್ಕೊಂಡು ಬಿಡುವಂತಿ.

ಅಲ್ಲಿ ನೋಡು... ಸಿಟೀಲಿ ನಿಮ್ಮ ಸಹೋದರರು ಇದ್ದಾರಲ್ವಾ., ಅವರಿಗೆ ಬಾದಾಮಿ, ಗೋಡಂಬಿ, ಕಲ್ಲುಸಕ್ಕರೆ, ಬಾಳೆಹಣ್ಣು, ಜೇನುತುಪ್ಪ, ಆಕಳ ಹಾಲು, ಉತ್ತತ್ತಿ, ಒಣಕೊಬ್ಬರಿ, ತುಪ್ಪಾ, ಹಣ್ಣುಹಂಪಲು ಏನ್ ಸುಖಬೇ ಮಾರೆಮ್ಮಾ... ನೀ ಅಲ್ಲಾದರೂ ಇರಬಾರ್ದಾ. ಈಗೇನಾಯ್ತು ನಡಿ. ನೀನು ಸಂವಿಧಾನ ನೀಡಿರೋ ಸಾಮಾಜಿಕ ಹಕ್ಕನ್ನು ಕೇಳಿಬಿಡು. ಅವರ ಸವಲತ್ತುಗಳನು ನನಗೂ ಕೊಡಿ ಅಂತಾ ಒಂದು ಅರ್ಜಿ ಗುಜರಾಯಿಸು. ಆ ಕಾಪಿಟೂ ಎಲ್ಲಾದ್ರೂ ಹಾಕು ಎಂದ ರಾಮಣ್ಣ. ಈಗಲ್ಲ ಇನ್ನ ಹತ್ತು ವರ್ಷಕ್ಕಾದರೂ ನೀ ಸಾಯೋದರೊಳಗ ಅದು ಇಪ್ಲಿಮೆಂಟ್ ಆದರ ಸಾಕು. ನಿನ್ನ ಮಕ್ಕಳು, ಮರಿ ಮೊಮ್ಮಕ್ಕಳಿಗಾದರೂ ಅದು ಸಿಗುತ್ತೆ. ಎಷ್ಟು ಅಂತಾ ಈ ಹಾಳು ಕೊಂಪೇಲಿ ಇರೋದು. ನೀನ್ ಇವತ್ತು ಇದ್ದೀಯಾ, ನಾಳೆ ಸಾಯ್ತಿಯಾ ಹೌದಲ್ಲೋ ಅಂತಾ ರಾಮಣ್ಣ ಮಾರೆಮ್ಮನಿಗೆ ಬುದ್ಧಿಮಾತು ಹೇಳಿದ ತಕ್ಷಣ ಆಕೆ ಹೌದೆಂಬಂತೆ ತಲೆಯಾಡಿಸಿದಳು. ಇತ್ತ ಭಕ್ತರು ಒಂದೇ ಸಮನೇ ನಡಗುವ ಕಾಲಿಗೆ ಬಿದ್ದು ಆಶೀರ್ವಾದ ತೆಗೆದುಕೊಳ್ಳುತ್ತಿದ್ದರು.

ಯಾರೇ ಬುದ್ಧಿವಾದ ಹೇಳಿದರೂ, ಅವಳ ಮನಸಲ್ಲಿ ಸ್ಮಾರ್ಟ್.... ಆಸೆ ಚಿಗುರೊಡೆಯುತ್ತಿತ್ತು. ಹಳ್ಳಿಗಳನ್ನು ಸ್ಮಾರ್ಟ್‌ಸಿಟಿ ವ್ಯಾಪ್ತಿಗೆ ಸೇರಿಸೋ ಲೆಕ್ಕಾಚಾರ ಅವಳಿಗೆ ಭಕ್ತರಿಂದ ತಿಳಿದಿತ್ತು. ಅಂದುಕೊಂಡ ಭಾವನೆಗಳಿಗೆ, ಕಂಡ ಕನಸಿಗೆ ಇನ್ನಷ್ಟು ಖುಷುವು ಬಂದರೆ ಸಾಕು. ಹೇಗೋ ಬದುಕಲೇಬೇಕು. ಬದಲಾದ ಕಾಲಕ್ಕೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು